ಅಧ್ಯಕ್ಷರು :– ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸಬೇಕು.

1. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2) ನೇ ಅನುಚ್ಛೇದದ ಮೇರೆಗೆ 31 ನೇ ಮಾರ್ಚ್, 2012 ನೇ ವರ್ಷಕ್ಕೆ ಕೊನೆಗೊಂಡಂತೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಸ್ಥಳೀಯ ಸಂಸ್ಥೆಗಳ ವರದಿ (ಸಂಖ್ಯೆ 6) ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ರಾಜ್ಯದಲ್ಲಿ ತೀವ್ರವಾದ ಬರಗಾಲ ಬಗ್ಗೆ.

ಅಧ್ಯಕ್ಷರು :– ಮಂಡಿಸಲಾಯಿತು. ಈಗ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ.

ಅಧ್ಯಕ್ಷರು :– ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 155 ತಾಲ್ಲೂಕುಗಳನ್ನು ಬರಗಾಲ ಪ್ರದೇಶವೆಂದು ಘೋಷಣೆ ಮಾಡಲಾಗಿದೆ. ಇವತ್ತು ಕೆಲವು ಕಡೆಗಳಲ್ಲಿ ಮಳೆಯಾಗಿದೆ, ಕೆಲವು ಕಡೆಗಳಲ್ಲಿ ಮಳೆಯಾಗಿಲ್ಲ. ಈ ಬಗ್ಗೆ ಕಳೆದ ಎರಡು ತಿಂಗಳುಗಳಿಂದ ಯಾವುದೇ ಸಭೆ ನಡೆದಿಲ್ಲ, 155 ತಾಲ್ಲೂಕುಗಳಲ್ಲದೇ ಇನ್ನೂ ಕೆಲವು ಕಡೆಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಿದೆ. 155 ತಾಲ್ಲೂಕುಗಳಲ್ಲದೇ ಇನ್ನೂ ಹೆಚ್ಚಿನ ತಾಲ್ಲೂಕುಗಳಲ್ಲಿ ಬರಗಾಲ ಎನ್ನುವುದನ್ನು ಘೋಷಣೆ ಮಾಡಿದ್ದೀರಿ, ಇನ್ನೂ ಬರಗಾಲ ಎನ್ನುವುದನ್ನು ತೆಗೆದಿಲ್ಲ, ಕೆಲವು ಕಡೆಗಳಲ್ಲಿ ಮಳೆಯಾಗಿದೆ, ಕೆಲವು ಕಡೆಗಳಲ್ಲಿ ಮಳೆಯಾಗಿಲ್ಲ. ಕುಡಿಯುವ ನೀರಿಗಾಗಿ ಕನಿಷ್ಠ ಎರಡರೆಡು ಕೋಟಿ, ಮೂರು ಮೂರು ಕೋಟಿ ರೂ.ಗಳ ಹಣ ಬೇಕಾಗುತ್ತದೆ. ಇದು ಕುಡಿಯುವ ನೀರಿಗಿರಬಹುದು, ಜಾನುವಾರುಗಳಿಗಿರಬಹುದು, ಆ ಉದ್ದೇಶದಿಂದ ನಾನು ನಿಲುವಳಿ ಸೂಚನೆಯನ್ನು ತಂದಿದ್ದೇನೆ. ಅದಕ್ಕೆ ತಾವು ಅವಕಾಶವನ್ನು ಕೊಡಬೇಕಾಗುತ್ತದೆ. ಈಗೇನಾಗಿದೆಯೆಂದರೆ, ಕೆಲವು ಹಳ್ಳಿಗಳಲ್ಲಿ ಬೋರ್‌ವೆಲ್

ತೆಗೆದಿದ್ದಾರೆ, ಆದರೆ ಅಲ್ಲಿ ಪೈಪ್‌ಲೈನ್ ಎಳೆದಿಲ್ಲ, ಕೆಲವು ಕಡೆಗಳಲ್ಲಿ ದನಕರುಗಳಿಗೂ ಕೂಡ ಕುಡಿಯುವ ನೀರಿಲ್ಲ. ಒಂದು ಸಾವಿರ ಅಡಿ, ಒಂದೂವರೆ ಸಾವಿರ ಅಡಿಯವರೆಗೂ ಬೋರ್‌ವೆಲ್ ಕೊರೆದರೂ ಕೂಡ ನೀರು ಸಿಗುತ್ತಿಲ್ಲ. ಆದಕಾರಣ ಈ ಬಗ್ಗೆ ನಾನು ತಂದಿರುವ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಏಕೆಂದರೆ ಕೇವಲ ಇದು ಒಬ್ಬ ಶಾಸಕರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಲ್ಲ. ಆಡಳಿತ ಪಕ್ಷ ಮತ್ತು ನಮ್ಮ ವಿರೋಧ ಪಕ್ಷಗಳಲ್ಲಿರುವ ಎರಡೂ ಕಡೆಯ ಶಾಸಕರ ಕ್ಷೇತ್ರಗಳಲ್ಲಿ ಈ ಸಮಸ್ಯೆ ಇದೆ. ಇಂಥ ಒಂದು ಸನ್ನಿವೇಶ ಈಗ ಇದೆ. ಏಕೆಂದರೆ ಕಳೆದ ಮೂರು ತಿಂಗಳುಗಳಿಂದ ಚುನಾವಣೆ ಇದ್ದ ಕಾರಣ ಯಾವುದೇ ಕಡೆ ಬೋರ್‌ವೆಲ್ ತೆಗೆಯುವುದಕ್ಕೆ ಅವಕಾಶವಿರಲಿಲ್ಲ. ಈಗ ಜಿಲ್ಲಾ ಪಂಚಾಯತಿಯಲ್ಲಿಯೂ ಬೋರ್‌ವೆಲ್ ಕೊರೆದಿಲ್ಲ, ಡಿ.ಸಿ. ಕಡೆಯಿಂದಲೂ ಈ ಕೆಲಸ ಮಾಡಿಸಿಲ್ಲ. ಈ ಬಗ್ಗೆ ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದಿಂದ 1227 ಕೋಟಿ ಹಣ ಬಂದಿದ್ದು ಅದನ್ನು ಖರ್ಚು ಮಾಡಿದ್ದೀರಿ. ಕಳೆದ ಎರಡು ವರ್ಷಗಳಿಂದ ಬರಗಾಲವಿದೆ. ಆದುದರಿಂದ ಈಗ ಕೆಲವು ಕಡೆಗಳಲ್ಲಿ ಮಳೆಯಾಗಿದೆ, ಕೆಲವು ಕಡೆಗಳಲ್ಲಿ ಮಳೆಯಾಗಿಲ್ಲ. ಆದುದರಿಂದ ಈ ಬಗ್ಗೆ ಇವತ್ತೇ ಅತಿ ಜರೂರಾಗಿ ಚರ್ಚೆ ಮಾಡಿ ಕನಿಷ್ಠ ಒಂದೆರಡೆರಡು ಕೋಟಿ ರೂ.ಗಳ ಹಣವನ್ನು ತಾವಾದರೂ ಸರ್ಕಾರಕ್ಕೆ ಹೇಳಿ ಬಿಡುಗಡೆ ಮಾಡಿಸಬೇಕೆಂದು ಮನವಿ ಮಾಡುತ್ತೇನೆ. ಆದಕಾರಣ ಈ ಬಗ್ಗೆ ಚರ್ಚಿಸಲು ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ರೇವಣ್ಣನವರೆ, ಈ ಎಲ್ಲಾ ವಿಚಾರಗಳನ್ನು ರಾಜ್ಯಪಾಲರ ಭಾಷಣದ-ಮೇಲೆ ಮಾತನಾಡುವಾಗ ಹೇಳಬಹುದು.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಇದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂಥ ಚರ್ಚೆಯಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ರೇವಣ್ಣನವರು ಎತ್ತಿರತಕ್ಕಂಥ ವಿಚಾರದಲ್ಲಿ ಎಲ್ಲರೂ ಕಾತರದಿಂದ ನೋಡುತ್ತಿದ್ದಾರೆ. ಆ ವಿಚಾರವನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪ್ರಸ್ತಾಪ ಮಾತಕ್ಕಂಥದ್ದು ಸೂಕ್ತವೆಂದು ಹೇಳುತ್ತೇನೆ. ಈಗ ಎರಡೇ ದಿವಸ ಇರುವಂಥದ್ದು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾನೂನು ಮಂತ್ರಿಗಳು ಕುಡಿಯುವ ನೀರಿನ ವಿಚಾರದಲ್ಲಿ Priority ಕೊಡದಿದ್ದರೆ ಇನ್ಯಾವುದಕ್ಕೆ Priority ಕೊಡುತ್ತಾರೆಂದು ಹೇಳಲಿ.

ಶ್ರೀ ಟಿ.ಬಿ.ಜಯಚಂದ್ರ : ಈಗ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ, ದಯವಿಟ್ಟು ಮಾನ್ಯ ಸಂಸದೀಯ ಸಚಿವರು ಎದ್ದಿದ್ದಾರೆ. ನೀವು yield ಆಗುವುದಾದರೆ ಅವರು ಮಾತನಾಡುತ್ತಾರೆ, ಇಲ್ಲವೆಂದರೆ ಕುಳಿತುಕೊಳ್ಳುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರು ನಿಯಮ 60ರಲ್ಲಿ ಏನು ಈ ವಿಚಾರವನ್ನು ಎತ್ತಿದ್ದಾರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇದರ ವಿಚಾರದಲ್ಲಿ ಚರ್ಚೆ ಮಾಡಬಹುದು.

ಅಧ್ಯಕ್ಷರು : ಅದನ್ನೇ ನಾನು ಹೇಳಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೂ ಮತ್ತು ಕುಡಿಯುವ ನೀರಿಗೂ ಸಂಬಂಧವಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರ ಆತಂಕ ಏನೆಂದರೆ ಅದಕ್ಕೆ ಆದ್ಯತೆ ಬರುವುದಿಲ್ಲ ಎಂದು ಇದೆ. ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ತಾವು ನನಗೆ ಕರೆದಿದ್ದೀರಿ.

ಅಧ್ಯಕ್ಷರು : ಆಯಿತು. ರೇವಣ್ಣನವರೆ, ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ : ಅವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಬರದ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಲಿ. ನಾವು ಉತ್ತರ ಕೊಡುವಾಗ ವಿಶೇಷವಾಗಿ ಉತ್ತರ ಕೊಡೋಣ. ಇವತ್ತು ಒಂದು ದಿವಸ ಚರ್ಚೆಗೆ ಸಮಯ ಇದೆ, ನಾಳೆ ಉತ್ತರ ಮಾಡಲೇಬೇಕಾಗುತ್ತದೆ. ಆದುದರಿಂದ ಬಹಳಷ್ಟು ಜನ ಈ ಕಡೆ 10 ಜನ ಮತ್ತು ಆ ಕಡೆ 10 ರಿಂದ 15 ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ತಾವು ಯಾವ ರೀತಿಯಾಗಿ accommodate ಮಾಡುತ್ತೀರೆನ್ನುವ ವಿಚಾರ ತಮಗೆ ಬಿಟ್ಟಿದ್ದು. ಎಲ್ಲಾ ವಿಚಾರವನ್ನು ಕೂಡ ಇದರಲ್ಲೇ ಪ್ರಸ್ತಾಪ ಮಾಡಿದರೆ ಸೂಕ್ತವಾಗುತ್ತದೆ. ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಚರ್ಚೆ ಮಾಡಲೇಬೇಕು ಎಂದು ಹೇಳಿದರೆ ನಿಯಮ 69ರಲ್ಲಿ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಚಾರ ಇದೆ. ನಾವು ಚರ್ಚೆಗೆ ಅಡ್ಡಿ ಪಡಿಸುವುದಕ್ಕೆ ತಯಾರಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಇದರ ಮೇಲೆ ಬೆಳಕು ಚೆಲ್ಲಬಹುದು ಅಥವಾ ರೂಲ್ 69ರಲ್ಲಿ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಮೊನ್ನೆ ಎರಡು ದಿನಗಳ ಕಾಲ ಜಿಲ್ಲಾಧಿಕಾರಿಗಳ ಮತ್ತು

ಸಿ.ಇ.ಓ.ಗಳ conference ಆಯಿತು, ಅದರಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಮತ್ತು ನಾವೆಲ್ಲರೂ ಹಾಜರಿದ್ದೆವು. ಇದರ ಬಗ್ಗೆ ನಾವು ಹೆಚ್ಚಿನ ಸಮಯ ಕೊಟ್ಟೆವು. ರಾಜ್ಯದಲ್ಲಿ ಎಲ್ಲಿಯೂ ಸಹ ಕುಡಿಯುವ ನೀರಿನ ಅಭಾವವಾಗಬಾರದು. ಎಲ್ಲಾ ಜಿಲ್ಲಾಧಿಕಾರಿಗಳ ಕಡೆ ಇವತ್ತು ಸಾಕಷ್ಟು ಹಣ ಇದೆ. ಆದರೆ ಒಂದು ಸಮಸ್ಯೆ ಬಂತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ calamities fundನಲ್ಲಿ ಏನು ಹಣ ಹೋಗುತ್ತದೆ. ಅದರಲ್ಲಿ ಬೋರ್‌ವೆಲ್ drill ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ಪಟ್ಟಣ ಪ್ರದೇಶಗಳಿಗೆ, ಗ್ರಾಮಾಂತರ ಪ್ರದೇಶಗಳಿಗೆ, ಎಲ್ಲಾ ಮುನಿಸಿಪಾಲಿಟಿಗಳಿಗೆ ವಿಶೇಷವಾದ ಅನುದಾನವನ್ನು ಕೊಟ್ಟಿದ್ದೇವೆ. ಹಾಗಾಗಿ ತಾವು ಪ್ರಸ್ತಾಪ ಮಾಡಬೇಕೆಂದಿರುವ ವಿಷಯ ಬಹಳ ಮಹತ್ವವಿದೆ. ಮಾನ್ಯ ಅಧ್ಯಕ್ಷರು ಏನು ಆದೇಶ ಕೊಡುತ್ತೀರಿ, ಆ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಒಂದು ಕೆಲಸ ಮಾಡೋಣ. ಇದರಲ್ಲಿಯೇ ಕಾಲ ಕಳೆಯುವುದು ಬೇಡ. ನಿಯಮ 69ರ ಅಡಿಯಲ್ಲಿ ನಾಳೆ ತೆಗೆದುಕೊಂಡು ಬಿಡೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯ ಇದೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳೇ, ಇದು ಬಹಳ ಗಂಭೀರವಾದ ವಿಚಾರ. ನೀರಿನ ವಿಚಾರ ಎಂದು ಹೇಳಿಬಿಟ್ಟರು. ಇದರ ಬಗ್ಗೆ ನಾಳೆ ಕುಳಿತುಕೊಂಡು ಚರ್ಚೆ ಮಾಡೋಣ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್.ಡಿ.ಕುಮಾರಸ್ವಾಮಿಯವರು ನಿಯಮ 69ರ ಮೇರೆಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ 69ರ ಮೇರೆಗೆ ಚರ್ಚೆಯನ್ನು ಆಮೇಲೆ ತೆಗೆದುಕೊಳ್ಳಿ.

ಅಧ್ಯಕ್ಷರು : ಇವತ್ತಿನ ಬಿಸಿನೆಸ್ ಇದೆ. ಹಾಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನೀವು ಹಿರಿಯ ಸದಸ್ಯರಿದ್ದೀರಿ, ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ debate ಪ್ರಾರಂಭವಾಗಲಿ. ವಿರೋಧ ಪಕ್ಷದ ನಾಯಕರು ಮಾತನಾಡಲಿ, ನಾವೂ ಮಾತನಾಡಬೇಕಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : ಹಾಗೆ ಆಗಲಿ, ಮಾನ್ಯ ಕುಮಾರಸ್ವಾಮಿಯವರು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಮಗೆ ಈ ವಿಷಯದ ಬಗ್ಗೆ ಚರ್ಚೆಯಾಗಲೇ ಬೇಕು. ನೀವು ಮಾತು ಕೊಟ್ಟಿದ್ದೀರಿ.

ಅಧ್ಯಕ್ಷರು : ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ಒಂದು ಪ್ರಸ್ತಾವನೆ ಇದೆ ಅದನ್ನು ಓದುತ್ತೇನೆ.

3. ಅಧ್ಯಕ್ಷರ ತೀರ್ಮ :– ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ ತಂದಿರುವ ಬಗ್ಗೆ.

ವಿಷಯ : ದಿನಾಂಕ 03–06–2013ರ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ 18ರಲ್ಲಿನ 28ನೇ ಕಂಡಿಕೆ 15ನೇ ಸಾಲಿನಿಂದ 17ನೇ ಸಾಲಿನವರೆಗೆ ಇರುವ 'ಕಾವೇರಿ ಐತೀರ್ಪಿನ ವಿಚಾರ'ದ ಬಗ್ಗೆ.

ಶ್ರೀಮಾನ್ ಹೆಚ್.ಡಿ.ಕುಮಾರಸ್ವಾಮಿಯವರು, ವಿರೋಧ ಪಕ್ಷದ ನಾಯಕರು, ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ದಿನಾಂಕ:03.06.2013ರಂದು ರಾಜ್ಯ ವಿಧಾನಮಂಡಲದಲ್ಲಿ ಮಾಡಿದ ಭಾಷಣದಲ್ಲಿನ ಪುಟ ಸಂಖ್ಯೆ 18ರಲ್ಲಿ 28ನೇ ಕಂಡಿಕೆ 15ನೇ ಸಾಲಿನಿಂದ 17ನೇ ಸಾಲಿನವರೆಗೆ ಇರುವ "ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು" ಎಂಬ ವಾಕ್ಯವನ್ನು ಕೈಬಿಡಬೇಕೆಂಬ ತಿದ್ದುಪಡಿ ಸೂಚನಾ ಪತ್ರವನ್ನು ನೀಡಿದ್ದು, ಅದನ್ನು ಪರಿಶೀಲಿಸಲಾಗಿರುತ್ತದೆ. ಈ ಕುರಿತು ಲೋಕಸಭೆಯಲ್ಲಿ ನಡೆದ ಒಂದು ಉದಾಹರಣೆಯತ್ತ ಗಮನ ಸೆಳೆಯಲಾಗಿದೆ. ಸಂಸದೀಯ ಕಾರ್ಯ ವಿಧಾನದ ಕುರಿತು ಶ್ರೀ ಸುಭಾಷ್ ಕಶ್ಯಪ್‌ರವರ ಪುಸ್ತಕದ ಪುಟ ಸಂಖ್ಯೆ:462ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

21.3 Amendment seeking to alter the text of president's Address is inadmissible. During 5S (7LS)a member (Ram vilas paswan) tabled an amendment to Motion of Thanks on President's Address which sought to substitute certain portions of paragraph two of the Address. Amendment was not admitted. ಈ ಹಿನ್ನೆಲೆಯಲ್ಲಿ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು, ಮಾನ್ಯ ವಿರೋಧ ಪಕ್ಷದ ನಾಯಕರು